ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ **03.07.2023**

ಮುಂದುವರೆದ ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದ

ಸಾಕ್ಷಿಯು 90 ಎಂ ಎಲ್ ನ ಓರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿ ತುಂಬಿದ 4 ಟೆಟ್ರಾ ಪ್ಯಾಕೇಟ್ ಗಳನ್ನು ಬಿಳಿ ಬಟ್ಟೆಯಿಂದ ಸುತ್ತಿ ಪ್ಯಾಕ್ ಮಾಡಿರುವುದನ್ನು ನ್ಯಾಯಾಲಯದ ಮುಂದೆ ನೋಡಿ ಗುರುತಿಸಿದ್ದು ಅದನ್ನು ಮುಮಾ-1 ಎಂದು, ಸಾಕ್ಷಿಯು 90 ಎಂ ಎಲ್ ನ ಬಿಜಾಯಿಸ್ ಬಿ ಎಸ್ ಓ ಪಿ ಬ್ರಾಂಡಿ ತುಂಬಿದ 4 ಟೆಟ್ರಾ ಪ್ಯಾಕೇಟ್ ಗಳನ್ನು ಬಿಳಿ ಬಟ್ಟೆಯಿಂದ ಸುತ್ತಿ ಪ್ಯಾಕ್ ಮಾಡಿರುವುದನ್ನು ನ್ಯಾಯಾಲಯದ ಮುಂದೆ ನೋಡಿ ಗುರುತಿಸಿದ್ದು ಅದನ್ನು ಮುಮಾ-2 ಎಂದು, ಸಾಕ್ಷಿಯು 90 ಎಂ ಎಲ್ ನ ಡಿಲಕ್ಸ್ ತ್ರಿಬಲ್ ಎಕ್ಸ್ ರಮ್ ತುಂಬಿದ 4 ಟೆಟ್ರಾ ಪ್ಯಾಕೇಟ್ ಗಳನ್ನು ಬಿಳಿ ಬಟ್ಟೆಯಿಂದ ಸುತ್ತಿ ಪ್ಯಾಕ್ ಮಾಡಿರುವುದನ್ನು ನ್ಯಾಯಾಲಯದ ಮುಂದೆ ನೋಡಿ ಗುರುತಿಸಿದ್ದು ಅದನ್ನು ಮುಮಾ-3 ಎಂದು, ಸಾಕ್ಷಿಯು 180 ಎಂ ಎಲ್ ನ ಡಿಲಕ್ಸ್ ತ್ರಿಬಲ್ ಎಕ್ಸ್ ರಮ್ ತುಂಬಿದ 4 ಟೆಟ್ರಾ ಪ್ಯಾಕೇಟ್ ಗಳನ್ನು ಬಿಳಿ ಬಟ್ಟೆಯಿಂದ ಸುತ್ತಿ ಪ್ಯಾಕ್ ಮಾಡಿರುವುದನ್ನು ನ್ಯಾಯಾಲಯದ ಮುಂದೆ ನೋಡಿ ಗುರುತಿಸಿದ್ದು ಅದನ್ನು ಮುಮಾ-4 ಎಂದು, ಸಾಕ್ಷಿಯು 180 ಎಂ ಎಲ್ ನ ಬಿಜಾಯಿಸ್ ಬಿ ಎಸ್ ಓ ಪಿ ಬ್ರಾಂಡಿ ತುಂಬಿದ 5 ಟೆಟ್ರಾ ಪ್ಯಾಕೇಟ್ ಗಳನ್ನು ಬಿಳಿ ಬಟ್ಟೆಯಿಂದ ಸುತ್ತಿ ಪ್ಯಾಕ್ ಮಾಡಿರುವುದನ್ನು ನ್ಯಾಯಾಲಯದ ಮುಂದೆ ನೋಡಿ ಗುರುತಿಸಿದ್ದು ಅದನ್ನು ಮುಮಾ-5 ಎಂದು, 2 ಖಾಕಿ ಬಣ್ಣದ ರಟ್ಟಿನ ಬಾಕ್ಸ್ ನ್ನು ಮುಮಾ-6 ಮತ್ತು 7 ಎಂದು, ಚೈನಿ ಚೈನಿ ಎಂದು ಹಿಂದಿ ಮತ್ತು ಇಂಗ್ಲೀಷ್ ಅಕ್ಷರದಲ್ಲಿ ಬರೆದಿರುವ ಬಿಳಿ ಹಸಿರು ಮತ್ತು ಹಳದಿ ಮಿಶ್ರಿತ ಬಟ್ಟೆ ಬ್ಯಾಗ್ ನ್ನು ಸಾಕ್ಷಿನೋಡಿ ಗುರುತಿಸಿದ್ದು ಅದನ್ನು ಮುಮಾ-8 ಎಂದು, ಕಪ್ಪು ಮತ್ತು ಬೂದು ಬಣ್ಣದ ಅಮೇರಿಕನ್ ಟೂರಿಸ್ಟ್ ಎಂದು ಇಂಗ್ಲಿಷ್ ನಲ್ಲಿ ಬರೆದಿರುವ ಬೆನ್ನಿಗೆ ಹಾಕುವ ಖಾಲಿ ಬ್ಯಾಗ್ ನ್ನು ನೋಡಿ ಗುರುತಿಸಿದ್ದು ಅದನ್ನು ಮುಮಾ-9 ಎಂದು, ಒಟ್ಟು ರೂ.1100/- ನಗದು ಹಣ, ರೂ.100/- ಮುಖ ಬೆಲೆಯ 7 ನೋಟುಗಳು, ರೂ.200/- ಮುಖ ಬೆಲೆಯ 2 ನೋಟುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮುಮಾ-10 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಂ ಎಸ್ ಆರ್ ವಕೀಲರಿಂದ

ನಮ್ಮ ಪೊಲೀಸ್ ಠಾಣೆಯಿಂದ ಬ್ಯಾಡಗೊಟ್ಟ ಗ್ರಾಮಕ್ಕೆ ತೆರಳಲು ಕೂಡಿಗೆ , ಮದಲಾಪುರ ಮಾರ್ಗವಾಗಿ ಒಂದೆ ದಾರಿ ಇರುತ್ತದೆ. ಕೂಡಿಗೆ , ಕಣಿವೆ ತೂಗು ಸೇತುವೆ, ಭುವನಗಿರಿ ಮಾರ್ಗವಾಗಿ ಸಹ ತಲುಪಬಹುದು ಎಂದರೆ ಸಾಕ್ಷಿ ತಲುಪಬಹುದು ಇದೆ ಮುಖ್ಯ ರಸ್ತೆಯಾಗಿರುತ್ತದೆ ಎನ್ನುವರು. ನಮ್ಮ ಪೊಲೀಸ್ ಠಾಣೆಯಿಂದ ಕೂಡಿಗೆ ಮಾರ್ಗವಾಗಿ ಹೋದಲ್ಲಿ 30 ನಿಮಿಷಗಳ ಕಾಲ ಹಾಗೂ ಕಣಿವೆ ಮಾರ್ಗವಾಗಿ ಹೋದಲ್ಲಿ 40 ನಿಮಿಷಗಳ ಕಾಲ ಬೇಕಾಗುತ್ತದೆ. ಕೂಡಿಗೆ ಮಾರ್ಗವಾಗಿ ಕೆಲವು ರಸ್ತೆ ಉಬ್ಬುಗಳು ಇವೆ ಎಂದರೆ ಸರಿ. ಆದ ಕಾರಣ 30 ನಿಮಿಷದಲ್ಲಿ ಬ್ಯಾಡಗೊಟ್ಟ ಗ್ರಾಮ ತಲುಪಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಮದಲಾಪುರದಿಂದ ಬ್ಯಾಡಗೊಟ್ಟಕ್ಕೆ ಹೋಗುವ ರಸ್ತೆ ಕಡಿದಾದ ರಸ್ತೆ ಎಂದರೆ ಸರಿ. ಸದ್ರಿ ರಸ್ತೆಯಲ್ಲಿ ಬ್ರಿಡ್ಜ್ ರಸ್ತೆ ಉಬ್ಬು ರಸ್ತೆಯಲ್ಲಿ ಗುಂಡಿಗಳು ಇವೆ ಎಂದರೆ ಸರಿ. ಬಾತ್ಮಿದಾರರಿಂದ ಮಾಹಿತಿ ಬಂದ ನಂತರ ದಾಳಿಗೆ ಹೊರಡಲು ಸಿದ್ದತೆಗಾಗಿ 10 ನಿಮಿಷಗಳ ಕಾಲ ಸಮಯ ತೆಗೆದುಕೊಂಡಿರುತ್ತೇವೆ. ಸಿದ್ದತೆಯ ನಂತರ ದಾಳಿಗೆ ಹೊರಟಿರುತ್ತೇವೆ ಎಂದರೆ ಸರಿ. ದಾಳಿಗೆ ಸಿಬ್ಬಂದಿಗಳನ್ನು ನೇಮಕ ಮಾಡುವ ಬಗ್ಗೆ ಠಾಣಾ ದಿನಚರಿಯಲ್ಲಿ ನಮೂದು ಇರುತ್ತದೆ ಎಂದರೆ ಸರಿ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ.

2. ಪಂಚರನ್ನು ಕೂಡಿಗೆ ಜಂಕ್ಷನ್ ಬಳಿ ಬರಮಾಡಿಕೊಂಡು ನಂತರ ಅವರಿಗೆ ನೋಟೀಸ್ ನ್ನು ನೀಡಲಾಗಿದೆ. ನೋಟೀಸ್ ನೀಡುವ ಸಮಯದಲ್ಲಿ ದಾಳಿಯ ಬಗ್ಗೆ ಪಂಚರಿಗೆ ತಿಳಿಸಲಾಗಿದೆ. ಕೃತ್ಯ ಸ್ಥಳಕ್ಕೆ ನಮ್ಮ ಇಲಾಖಾ ಜೀಪ್ ಹೋಗಿ ನಿಲ್ಲಿಸಿದ ತಕ್ಷಣ ನಾವೆಲ್ಲರೂ ಆರೋಪಿಯನ್ನು ನೋಡಿರುತ್ತೇವೆ. ನಮ್ಮ ಇಲಾಖಾ ಜೀಪ್ ನಿಲ್ಲಿಸಿದ ಸ್ಥಳಕ್ಕೂ ಆರೋಪಿ ಬೈಕ್ ನಿಲ್ಲಿಸಿಕೊಂಡಿದ್ದ ಸ್ಥಳಕ್ಕೂ ಸುಮಾರು 20 ಅಡಿ ಅಂತರ ಇರುತ್ತದೆ. ನೋಟೀಸ್ ನ್ನು ಪಿ ಎಸ್ ಐ ರವರು ಜಾರಿ ಮಾಡಿರುತ್ತಾರೆ. ಆರೋಪಿಯ ಬಳಿ ಇತ್ತು ಎಂದು ಹೇಳಲಾಗುವ

ಬ್ಯಾಗುಗಳನ್ನು ಮೊದಲಿಸಿ ಪಿ ಎಸ್ ಐ ಚಾಸಾ-2 ಮತ್ತು ಚಾಸಾ-4 ರವರು ಪರಿಶೀಲಿಸಿರುತ್ತಾರೆ. ನಾನು ಸಹ ಪರಿಶೀಲನೆ ಮಾಡಿರುತ್ತೇನೆ. ನಾನು ಆರೋಪಿಯ ಬ್ಯಾಗುಗಳನ್ನು ಪರಿಶೀಲನೆ ಮಾಡಿರುವ ಬಗ್ಗೆ ಹೇಳಿಕೆಯಲ್ಲಿ ತಿಳಿಸಿಲ್ಲ ಎಂದರೆ ಸರಿ. 2 ಬ್ಯಾಗುಗುಳನ್ನು ತೆರೆದು ಅದರಲ್ಲಿ ಇದ್ದ ಮಧ್ಯದ ಪ್ಯಾಕೇಟ್ ಗಳನ್ನು ಚಾಸಾ-2 ರವರು ಕೆಳಕ್ಕೆ ಸುರಿದಿರುತ್ತಾರೆ. ಮೊದಲಿಗೆ ಮುಮಾ-9 ರಲ್ಲಿ ಇದ್ದಂತಹ ಪ್ಯಾಕೇಟ್‌ಗಳನ್ನು ಸುರಿಯಲಾಯಿತು. ಸದ್ರಿ ವಿಚಾರವನ್ನು ಹೇಳಿಕೆಯಲ್ಲಿ ನಮೂದಿಸಿಲ್ಲ. ಮುಮಾ-9 ರಲ್ಲಿ ಒಂದೆ ಕಂಪನಿಗೆ ಸೇರಿದ ಮಧ್ಯದ ಪ್ಯಾಕೇಟ್ ಗಳು ಇತ್ತೊ ಅಥವಾ ವಿವಿಧ ಕಂಪನಿಗೆ ಸೇರಿದ ಮಧ್ಯದ ಪ್ಯಾಕೇಟ್ ಗಳು ಇತ್ತೊ ಹಾಗೂ ಅವುಗಳು ಎಷ್ಟು ಇತ್ತು ಎಂದು ನನಗೆ ಹೇಳಲು ಬರುವುದಿಲ್ಲ. ಸದ್ರಿ ವಿಚಾರವನ್ನು ನಿಪಿ-2 ರಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ. ಮುಮಾ-9 ರಲ್ಲಿ ವಶಪಡಿಸಿಕೊಂಡ ಮಧ್ಯದ ಪ್ಯಾಕೇಟ್ ಗಳ ಸೀರಿಯಲ್ ನಂಬರ್ ನ್ನು ನಿಪಿ-2 ರಲ್ಲಿ ನಮೂದಿಸಿಲ್ಲ ಎಂದರೆ ಸಾಕ್ಷಿ ಎಲ್ಲಾ ಪ್ಯಾಕೇಟ್ ಗಳ ಸೀರಿಯಲ್ ನಂಬರ್ ನ್ನು ನಮೂದಿಸಿದ್ದು ಅವುಗಳನ್ನು ಪ್ರತ್ಯೇಕವಾಗಿ ನಮೂದಿಸಿಲ್ಲ ಎಂದು ನುಡಿಯುತ್ತಾರೆ.

3. ನಾವು ಮಹಜರ್ ನ್ನು 2.35 ಗಂಟೆಗೆ ಬರೆಯಲು ಪ್ರಾರಂಭಿಸಿರುತ್ತೇವೆ. ಅದೇ ರೀತಿ ಪಂಚರಿಗೆ ನೋಟೀಸ್ ನ್ನು 2.30 ಗಂಟೆಗೆ ನೀಡಿರುತ್ತೇವೆ ಎಂದರೆ ಸರಿಯಲ್ಲ. ದಾಳಿ ಸಮಯದಲ್ಲಿ ಆರೋಪಿಯ ಅಂಗಶೋಧನೆಯನ್ನು ಮಾಡಲಾಗಿದೆ. ಚಾಸಾ-4 ರವರು ಆರೋಪಿಯ ಅಂಗಶೋಧನೆ ಮಾಡಿರುತ್ತಾರೆ. ಅಂಗಶೋಧನೆಯಿಂದ ಕೇವಲ ಹಣ ಮಾತ್ರ ದೊರೆತಿರುತ್ತದೆ. ಮುಮಾ-10 ಯಾವುದೆ ಮಧ್ಯ ಮಾರಾಟದಿಂದ ಬಂದ ಹಣ ಅಲ್ಲ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಪ್ರಕರಣ ಸೃಷ್ಟಿಸುವ ಸಲುವಾಗಿ ವಿವಿಧ ಮುಖ ಬೆಲೆಯ ನೋಟುಗಳನ್ನು ಈ ಪ್ರಕರಣದಲ್ಲಿ ಹಾಜರುಪಡಿಸಲಾಗಿದೆ ಎಂದರೆ ಸರಿಯಲ್ಲ. ಆರೋಪಿಯಿಂದ ಯಾವುದೆ ಹಣ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿರುತ್ತಾರೆ ನೀಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ